# ಹಿರಿಯ ಸಿವಿಲ್ ನ್ಯಾಯಾಲಯ, ಚಿತ್ತಾಪೂರ

**ಅಸಲು ದಾವಾ ನಂಃ 36/2016**
**ಪಿ.ಡಬ್ಲ್ಯೂ. 1.**

ದಿನಾಂಕಃ 21-07-2018 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

ಪಾಟಿ ಸವಾಲು ಃ- ಶ್ರೀ ಎಸ್.ಪಿ. ವಕೀಲರಿಂದ

ನನ್ನ ತಂದೆ ಪ್ರತಿವಾದಿ ನಂ. 1 ಮತ್ತು 3 ಮೂರು ಜನ ಸೇರಿ ಒಂದು ಕಲ್ಲಿನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಅಂದರೆ ನಿಜ. ಪ್ರತಿವಾದಿ ನಂ. 2 ಟ್ಯಾಕ್ಸ್ ಕಲೆಕ್ಷನ್ ಕೆಲಸ ಮಾಡುತ್ತಿದ್ದರು ಅಂದರೆ ನಿಜ. ಪ್ರತಿವಾದಿ ನಂ. 3 1972-78 ರವರೆಗೆ ಸಿಂಡಿಕೇಟ್ ಕಲ್ಲಿನ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದನು ಅಂದರೆ ನನಗೆ ಗೊತ್ತಿರುವುದಿಲ್ಲ. 1978 ರಲ್ಲಿ ಪರತಿವಾದಿ ನಂ. 3 ಸರಕಾರಿ ಕಂಪನಿಯಲ್ಲಿ ನೇಮಕ ಗೊಂಡು ಭೀಮರಾಯನಗುಡಿಗೆ ಹೋದನು ಅಂದರೆ ನಿಜ. ನಾನು ಎಸ್ ಎಸ್ ಎಲ್ ಸಿ ಯನ್ನು ಪ್ರತಿವಾದಿ ನಂ. 3 ಹತ್ತಿರ ಇದ್ದು ಅಲ್ಲಿಯೇ ಓದಿರುತ್ತೇನೆ ಅಂದರೆ ನಿಜ. ದಾವಾ ಆಸ್ತಿಯನ್ನು ನಮ್ಮ ತಂದೆ ಖರೀದಿ ಮಾಡಿದ ಬಗ್ಗೆ ನಾನು ಕಾಗದವನ್ನು ಹಾಜರುಪಡಿಸಿರುತ್ತೇನೆ. ನನ್ನ ತಂದೆ 1978 ರಲ್ಲಿ ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತಾನೆ. ಆತನು 10 ಸಾವಿರ ರೂ. ಗೆ ಅದನ್ನು ಖರೀದಿ ಮಾಡಿರುತ್ತಾನೆ. ಸದರಿ ಖರೀದಿ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ. 1978 ರಲ್ಲಿ ಖರೀದಿ ಮಾಡಿದ ಖರೀದಿ ಪತ್ರವನ್ನು ನಾನು ಹಾಜರುಪಡಿಸಿರುತ್ತೇನೆ. ಸದರಿ ಕಾಗದವನ್ನು ಹಾಜರುಪಡಿಸಿರುವುದಿಲ್ಲ ಅಂತ ಹೇಳುವುದು ಸರಿಯಲ್ಲ. ಮುನ್ಸಿಪಾಲಿಟಿಗೆ ನನ್ನ ತಾಯಿ ಒಂದು ಅರ್ಜಿಯನ್ನು ಕೊಟ್ಟು ಪ್ರತಿವಾದಿ ನಂ. 1, 2, 3 ಮತ್ತು ನಮ್ಮ ತಾಯಿ ಹೆಸರು ದಾಖಲು ಮಾಡಲು ನಿಶಾನೆ ಪಿ-21 ನ್ನು ಕೊಟ್ಟಿದ್ದಳು ಅಂದರೆ ಸರಿಯಲ್ಲ. ಅದೇ ರೀತಿ ನನ್ನ ತಾಯಿ ಮುನ್ಸಿಪಾಲಿಟಿಗೆ ನಿಶಾನೆ ಪಿ-22 ಪ್ರಮಾಣ ಪತ್ರವನ್ನು ಕೂಡ ಕೊಟ್ಟಿದ್ದಳು ಅಂತ ಹೇಳಿದರ ಸರಿಯಲ್ಲ. ಮುನ್ಸಿಪಾಲಿಟಿಯವರಿಗೆ ನಿಶಾನೆ ಪಿ-30 ರ ಪ್ರಕಾರ ನಮ್ಮ ಮತ್ತು ಪ್ರತಿವಾದಿಯರ ಪ್ರಕಾರ ಹಿಸ್ಸೆ ಮಾಡಿಕೊಟ್ಟಿಕೊಟ್ಟಿರುತ್ತಾರೆ ಅಂದರೆ ಸರಿಯಲ್ಲ. ಮುನ್ಸಿಪಾಲಿಟಿ ದಾಖಲೆಯಲ್ಲಿ ಪ್ರತಿವಾದಿಯರು ಹೆಸರು ಇದ್ದದ್ದು ನನಗೆ ಗೊತ್ತಿರುವುಲದಿಲ್ಲ. ಮುನ್ಸಿಪಾಲಿಟಿಯಲ್ಲಿ ಮುಟೇಶನ್ ಆದ ನಂತರ ಚಂದ್ರಕಾಂತ ಇತನು ಕಟ್ಟಡ ಕಟ್ಟಲು ಪರವಾನಗಿ ತೆಗೆದುಕೊಂಡಿದ್ದಾನೆ ಅಂದರ ನಿಜ. ಅದೇ ಪರಿಮಿಶನ ಆದಾರದ ಮೇಲೆ ಅವರು ಕಟ್ಟಡ ಮಾಡಿರುತ್ತಾರೆ ಅಂದರೆ ನಿಜ. ದಾವಾ ಆಸ್ತಿಯನ್ನು ನನ್ನ ತಂದೆ ಖರೀದಿ ಮಾಡಿರುತ್ತಾನೆ

ಅಂತ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. 1978 ರಲ್ಲಿ ನನ್ನ ತಂದೆಗೆ ಪ್ರತಿ ತಿಂಗಳ ಸಂಬಳ 250-300 ಇರಬಹುದು. ನನಗೆ ಪ್ರತಿವಾದಿಯರ ಸಂಬಳ ಎಷ್ಟಿತ್ತು ಎನ್ನುವುದು ನನಗೆ ಗೊತ್ತಿರುವುದಿಲ್ಲ. 1978 ರವರಗೆ ನಮ್ಮ ತಂದೆ ಮತ್ತು ಕಾಕನವರು ಒಟ್ಟಿಗೆ ಇದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯನ್ನು ನಮ್ಮ ತಂದೆ ಮತ್ತು ಪ್ರತಿವಾದಿಯರು ಎಲ್ಲರೂ ಸೇರಿ ಖರೀದಿ ಮಾಡಿದ್ದು ಇರುತ್ತದೆ ಅಂತ ಹೆಳಿದರೆ ಸರಿಯಲ್ಲ. ಎಲ್ಲರೂ ಸೇರಿ ಖರೀದಿ ಮಾಡಿದ್ದರಿಂದ ನನ್ನ ತಾಯಿ ಅವರಿಗೆ ಬಾಗ ಮಾಡಿಕೊಟ್ಟಿರುತ್ತಾಳೆ ಅಂತ ಹೇಳುವುದು ಸರಿಯಲ್ಲ. ದಾವಾ ಆಸ್ತಿಯ ಮಾಲೀಕರು ನಾವೇ ಎಂದು ಘೋಸಿಸಲು ಯವುದೇ ಕಾಗದ ಪತ್ರ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರತಿವಾದಿಯರು ದಾವಾ ಆಸ್ತಿಗೆ ಸಂಬಂದಿಸಿರುವುದಿಲ್ಲ ಅಂತ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಯರು ಸಮಾನ ಹಕ್ಕುದಾರರು ಇರುತ್ತಾರೆ ಅಂತ ಹೇಳಿದರೆ ಸರಿಯಲ್ಲ. ನಾನು ಪ್ರತಿವಾದಿಯರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆ ಮಾಡಿದ್ದೇನೆ ಅಂದರೆ ಸರಿಯಲ್ಲ.

ಮರು ಪಾಟಿ ಸವಾಲು ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಚಿತ್ತಾಪೂರ.**